ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

1.	ಬೆಂಗಳೂರು–ಮೈಸೂರು ನಾಲ್ಕು ಪಥದ ರಸ್ತೆ	8944
2.	ಬಿಳಿಕೆರೆ–ಬೇಲೂರು ರಸ್ತೆ	3118
3.	ಜೇವರಗಿ–ಬಿಜಾಪುರ ರಸ್ತೆ	4011
4.	ವಾಡಿ–ರಾಯಚೂರು ರಸ್ತೆ	2743
5.	ಗದಗ–ರೋಣ–ಬಾದಾಮಿ ರಸ್ತೆ	234
6.	ಗುಲ್ಬರ್ಗಾ ವರ್ತುಲ ರಸ್ತೆ	508
	ಒಟ್ಟು	**19558**

5252(5940) ಶ್ರೀ ಗೋವಿಂದ ಎಂ. ಕಾರಜೋಳ್ (ಮುಧೋಳ) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮುಖ್ಯ ಇಂಜಿನಿಯರ್ / ಅಧೀಕ್ಷಕ ಇಂಜಿನಿಯರ್ / ಕಾರ್ಯನಿರ್ವಾಹಕ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ ಬಡ್ತಿಯ ಮೂಲಕ ಈ ಹುದ್ದೆಗಳನ್ನು ತುಂಬಲು ಸರ್ಕಾರಕ್ಕೆ ಇರುವ ತೊಂದರೆ ಏನು ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) :

ಅ) ಬಂದಿದೆ

ಆ) ಅಧೀಕ್ಷಕ ಇಂಜಿನಿಯರ್ / ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆಗಳು ಖಾಲಿಯಾದಂತೆಲ್ಲಾ ಬಡ್ತಿಯ ಮೂಲಕ ತುಂಬಲಾಗುತ್ತಿದೆ.

ಮುಖ್ಯ ಇಂಜಿನಿಯರ್ ವೃಂದಕ್ಕೆ ಅಧೀಕ್ಷ ಇಂಜಿನಿಯರ್ ವೃಂದದಿಂದ ಬಡ್ತಿ ನೀಡಲು, ದಿನಾಂಕ 11–4–2002ರಂದು ಪ್ರಕಟಿಸಲಾದ ಅಧೀಕ್ಷಕ ಇಂಜಿನಿಯರ್ ವೃಂದದ ತಾತ್ಕಾಲಿಕ ಜೇಷ್ಟತಾ ಪಟ್ಟಿ ತೀರಿದ್ದು ಸರ್ವೋಚ್ಚ ನ್ಯಾಯಾಲಯದ ವಿವಿಧ ಮಧ್ಯಂತರ ಆದೇಶಗಳ ಹಿನ್ನೆಲೆಯಲ್ಲಿ ಅಧೀಕ್ಷಕ ಇಂಜಿನಿಯರ್ ವೃಂದದ ಮುಂದುವರೆದ ಜೇಷ್ಟತಾ ಪಟ್ಟಿಯನ್ನು ತಯಾರಿಸಲು ವಿಳಂಬವಾಗಿರುತ್ತದೆ.

5253(6169) ಶ್ರೀ ಗೋವಿಂದ ಎಂ.ಕಾರಜೋಳ್ (ಮುಧೋಳ್) ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 1998 ರಿಂದ 2004 ರವರೆಗೆ ಸರ್ಕಾರದ ಸಹಾಯಧನ ಪಡೆದೆ ಹೋಟೆಲ್ ಉದ್ದಿಮೆಗಳ ಸಂಖ್ಯೆ ಎಷ್ಟು ;

ಆ) ಇದುವರೆಗೆ ಸಹಾಯಧನ ಬಿಡುಗಡೆ ಮಾಡಿದ ಹೋಟೆಲ್‌ಗಳ ಪಟ್ಟಿ ಹಾಗೂ ಪ್ರತಿಯೊಂದಕ್ಕೂ ಎಷ್ಟೆಷ್ಟು ಹಣ ಮಾಡಲಾದ ಮೊತ್ತದ ವಿವರವನ್ನು ನೀಡುವುದು ;